ಪಡೆದಿರುತ್ತೇನೆ.'

'ಆದರೂ ನಿಮ್ಮನ್ನು ಬೆಳೆಸಿದ ಈ ಮಾಮ್‌ನ ಕೈಗುಣ ಕೆಲಸ ಮಾಡಿಲ್ಲವೇ?'

'ನನಗೆ ನಿಮ್ಮೊಂದಿಗೆ ವಾಗ್ವಾದ ಮಾಡುವ ಇಚ್ಛೆಯಿಲ್ಲ. ಅಪರೂಪಕ್ಕೆ ಅತಿಥಿಯಾಗಿ ಮನೆಗೆ ಬಂದಿರುವಿರಿ. ಸುಮ್ಮನೆ ಕೆಣಕುವ ಇರಾದೆ ಯಾಕೆ?'

'ಅರೆ... ಹನ್ಸ್, ಇಷ್ಟಕ್ಕೆ ಬೇಜಾರ್ಯಾಕೆ? ನಮ್ಮ ಕಂಪನಿ ಹೌಸ್‌ಕೀಪಿಂಗ್‌ಗೆ ಕೆಲವು ಆಫರ್‌ಗಳನ್ನು ನೀಡಿದಾಗ ನನ್ನ ಸಹೋದ್ಯೋಗಿಗಳಲ್ಲಿ ಹಲವರು ಅಸಿಸ್ಟೆಂಟ್ ರೊಬೋಗಳನ್ನು ಆಪ್ಟ್ ಮಾಡಿದ್ದರು. ನಾವು ಸದಾ ತುದಿಗಾಲ ಮೇಲೆ ನಿಂತು ಕಾರ್ಯ ನಿರ್ವಹಿಸಬೇಕಾದ ಪರಿಸ್ಥಿತಿಯಲ್ಲಿ ನಮಗೆ ಅದರ ಅವಶ್ಯಕತೆ ಬಹಳವಿತ್ತಾದರೂ ನಾನು ನನ್ನ ನಿರ್ಧಾರವನ್ನು ತಾಯಿಗೆ ಬಿಟ್ಟಿದ್ದೆ. ಅವರ ನಿರ್ಧಾರದಂತೆ ಮನೆಯ ಮಾಮೂಲಿ ಕೆಲಸ ಕಾರ್ಯಗಳಿಗೆ ಸಹಾಯ ಮಾಡಬಲ್ಲ ಸ್ವಾಯತ್ತ ಮರಿ ರೊಬೋವನ್ನು ಖರೀದಿ ಮಾಡಿದೆ.'

'ನಿಮ್ಮ ಮನೆಯ ವಿಚಾರ ನೀವು ಏನೂ ಹೇಳಲೇ ಇಲ್ಲ. ಹಾಗಾದರೆ ಮನೆಯಲ್ಲಿ ನೀವು, ನಿಮ್ಮ ತಾಯಿ ಹಾಗೂ ಆ ಸ್ವಾಯತ್ತ ಮರಿ ರೊಬೋ ಮಾತ್ರವೇ ಇರುವುದು?' ಕುತೂಹಲವನ್ನು ಹತ್ತಿಕ್ಕದಾಗಿದ್ದಳು.

'ನನ್ನ ಮನೆಗೆ ಬರುವ ಸೊಸೆಯನ್ನು ತುಂಬು ಕುಟುಂಬವೇ ಸ್ವಾಗತಿಸಬೇಕೆಂಬ ಆಸೆ ನನ್ನ ತಾಯಿಗೆ. ಆದ್ದರಿಂದ ಮದುವೆಯಾಗಿ ದೂರವಿದ್ದ ನನ್ನ ಒಬ್ಬಳೇ ತಂಗಿಯನ್ನೂ ಮನೆಗೇ ಕರೆಸಿಕೊಂಡಿದ್ದಾರೆ. ನನ್ನ ತಂದೆ ಪಕ್ಕಾ ವರ್ಕೋಹಾಲಿಕ್. ಅವರೂ ಇರುವರು.'

'ಹಾಗಾದರೆ ನಿಮ್ಮದು ತುಂಬು ಕುಟುಂಬ. ಜೊತೆಗೆ ಆ ಮರಿ ರೋಬೋ.'

'ಹೌದು. ನನ್ನ ಮಮ್ಮಿಯ ಸುಗ್ರೀವಾಜ್ಞೆ ಪಾಲಿಸುವ ಮುದ್ದಾದ ಮರಿ.'

'ನಿಮ್ಮ ಸೊಸೆಯಾಗುವವಳೂ ನಿಮ್ಮ ತಾಯಿಯ ಸುಗ್ರೀವಾಜ್ಞೆ ಪಾಲಿಸಬೇಕಾಗಿ ಬರುತ್ತೇನೋ?' ಎಂದು ಮಾತು ಎಳೆದಳು. ಅದರ ಎಳೆಯನ್ನು ಹಿಡಿದವನಂತೆ ಅವಿರತ್‌ನೂ ಅದೇ ಧಾಟಿಯಲ್ಲಿ ಪ್ರತಿಕ್ರಿಯಿಸಿದ್ದ.

'ಸಹಜವಾಗಿ. ನನ್ನ ತಾಯಿ ನಿನ್ನ ರೊಬೋ ಮಾಮ್ ಅಲ್ಲವಲ್ಲ...'

ಹನ್ಸಾ ಚಿಂತಾಕ್ರಾಂತಳಾಗಿದ್ದಳು. ಅವಿರತ್‌ಗೆ ಅವಳನ್ನು ಮತ್ತಷ್ಟು ಛೇಡಿಸುವ ಮನಸ್ಸಾಗಿತ್ತು. ಆದರೆ ಆ ಕೋಣೆಯಲ್ಲಿದ್ದ ನಿರ್ಜೀವ ವಸ್ತುವಿಗೆ ತನ್ನ ಹೆಸರು ಕಿವಿಗೆ ಬೀಳುತ್ತಿದ್ದಂತೆಯೇ ಚುರುಕಾಗಿ ಅವಿರತ್‌ನನ್ನು ನಿರುಕಿಸುತ್ತಾ ಕೇಳಿತ್ತು, 'ಮಿ. ಅವಿರತ್, ನಿಮಗೆ ಮತ್ತೇನು ಬೇಕಿದೆ?'

'ಮಾಮ್. ಸದ್ಯಕ್ಕೆ ಏನೂ ಬೇಕಿಲ್ಲ. ನಿಮ್ಮ ಕೈ ತಿನಿಸನ್ನು ಹೊಗಳುತ್ತಿದ್ದೆ' ಎಂದಾಗ ಅಲಕಾದೇವಿಯ ಮುಖ ಅರಳಿತ್ತು.

'ಸಂತೋಷ. ನೀವು ಸಿಟ್‌ಔಟ್‌ನಲ್ಲಿ ಕುಳಿತು ಮಾತನಾಡಲು ಬಯಸುವಿರಾ?'

'ಎಲ್ಲಾದರೂ ಆಗಬಹುದು' ಎಂದು ತನ್ನ ಒಪ್ಪಿಗೆ ಸೂಚಿಸಿದಾಗ ಅಲಕಾದೇವಿ ಅವರಿಬ್ಬರನ್ನೂ ಕರೆದೊಯ್ಯುತ್ತಾ, ಆ ಕೋಣೆಯನ್ನು ಹಾದು ಡೈನಿಂಗ್ ಹಾಲ್‌ಗೆ ಅಂಟಿಕೊಂಡಿದ್ದ ಬಾಗಿಲನ್ನು ತೆರೆದಳು. ಹೊರಗೆ ಆಗಲೇ ಸೂರ್ಯಾಸ್ತ ಬಳಿಕದ ಸಂಜೆಯ ಕೆಂಪು ಆಗಸವನ್ನಾವರಿಸಿತ್ತು.

'ಅವಿ, ಆ ಕೆಂಪಿನ ಮಧ್ಯೆ ಎಮರ್ಜೆನ್ಸಿ ಬಾಕ್ಸ್‌ಗಳು ಕಪ್ಪುವಸ್ತುಗಳಂತೆ ಹಾರಾಡುವುದು ಸೂರ್ಯಾಸ್ತಮಾನದ ಸವಿಯನ್ನು ಅನುಭವಿಸದಂತೆ ಮಾಡುತ್ತಿದೆ.'

'ನನಗೂ ಕೆಲವೊಮ್ಮೆ ನಮ್ಮ ಆಕಾಶವು ಶುಭ್ರವಾಗಿದ್ದರೆ ಎಷ್ಟು ಚೆನ್ನವೆಂದು ಅನಿಸಿದ್ದಿದೆ. ಅದನ್ನು ಚೆಂದ ಮಾಡಲು ವಲಯಗಳನ್ನು ರಚಿಸಿದ್ದು ಒಳ್ಳೆಯದೇ ಆಯ್ತೇನೋ.'

ಸೂರ್ಯನಿಂದ ಶೇಖರಿಸಿದ್ದ ಬೆಳಕನ್ನು ಆ ಸಿಟ್‌ಔಟ್‌ನ ಮೇಲೆ ಮಂದವಾಗಿ ಮೂಡಿಸಿದ್ದು ಅವರಿಗೆ ಹಗಲಿನ ಅನುಭವವನ್ನೇ ತರಿಸಿತ್ತು.

'ನಮ್ಮ ಸಂಚಾರ ವಿಭಾಗದ ಸಭೆಯನ್ನು ಶೀಘ್ರದಲ್ಲೇ ಕರೆಯಲಿರುವುದರಿಂದ ಅದರಲ್ಲಿ ನಮ್ಮ ಅಭಿಪ್ರಾಯ ತಿಳಿಸಲು ಅವಕಾಶವಿರುತ್ತದೆ. ಈ ದಿನ ಸಂಚಾರ ಕಮೀಷನರ್ ಸವ್ಯಸಾಚಿಯವರೂ ರೊಬೋಗಳ ಚಿಕಿತ್ಸೆಗೆ ತಗಲುವ ಖರ್ಚು ವೆಚ್ಚಗಳ ವಿಷಯವನ್ನು ಸಭೆಯ ಕಾರ್ಯಸೂಚಿಗಳಲ್ಲಿ ಸೇರಿಸುವ ವಿಚಾರ ತಿಳಿಸಿದ್ದರು.'

'ಒಳ್ಳೆಯದು. ಆದರೆ ಇಡೀ ಸಂಚಾರ ವಿಭಾಗದ ಸಭೆ ಎಂದ ಮೇಲೆ ಅದಕ್ಕೆ ಬಹಳಷ್ಟು ತಯಾರಿ ನಡೆಸಬೇಕಾಗುತ್ತೇನೋ?'

'ನಾನು ಪ್ರತಿ ಹದಿನೈದು ದಿನಗಳಿಗೊಮ್ಮೆ ನನ್ನ ಕರ್ತವ್ಯದ ಪುನರ್ ಪರಿಶೀಲನೆ ಮಾಡಿ ಟಾರ್ಗೆಟ್ ತಲುಪಿರುವೆನೋ ಇಲ್ಲವೋ ಎಂದು ಪರಿಶೀಲಿಸುವುದರಿಂದ ಅನುಕೂಲವಾಗಿದೆ. ಯಾವಾಗ ಸಭೆ ಕರೆದರೂ ನಾನು ತಯಾರಾಗಿರುವೆ.'

'ಸಭೆಯಲ್ಲಿ ಬಹುಶಃ ಸಂಚಾರ ಅಪಘಾತಗಳನ್ನು ಕಡಿಮೆ ಮಾಡುವ ವಿಚಾರ ಪ್ರಸ್ತಾಪಿಸಿ ಯೋಜನೆಗಳನ್ನು ಕೈಗೊಳ್ಳಬಹುದು. ಇಲ್ಲವೇ ಅಪಘಾತದ ನಂತರದ ಪುನರ್‌ವ್ಯವಸ್ಥೆಯ ಕಡೆ ಗಮನಹರಿಸಬಹುದು. ಜ್ವಲಂತ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಲೂಬಹುದು...' ಅವನ ವಿಚಾರಧಾರೆಗೆ ಹನ್ಸಾ ಒಗೊಡುವುದಷ್ಟೇ ಬಾಕಿಯಿತ್ತು. ಹೇಗೂ ಒಂದೆರಡು ದಿನಗಳಲ್ಲಿ ಸಭೆಯ ಕಾರ್ಯಸೂಚಿಗಳನ್ನು ನೀಡಿದ ಬಳಿಕ ಆ ವಿಚಾರವೆತ್ತಿದರಾಯಿತೆಂದು ದೂರದ ಬಾನಲ್ಲಿ ಮೂಡಿದ ಚಂದ್ರನೆಡೆ ದಿಟ್ಟಿಸಿದ್ದಳು. ಅವಳ ನೋಟವನ್ನನುಸರಿಸಿದ ಅವಿರತ್ ಕಚೇರಿಯ ಮಾತು ನಿಲ್ಲಿಸಿ ತಾನೂ ಚಂದ್ರನೆಡೆ ನೋಡಿದ. ಪೌರ್ಣಮಿಯ ಪೂರ್ಣಚಂದಿರ ರಾಜನಂತೆ ಆಗಷ್ಟೇ ಕತ್ತಲುಕ್ಕುತ್ತಿದ್ದ ಬಾನಲ್ಲಿ ವಿಜೃಂಭಿಸುತ್ತಿದ್ದ.

'ನಮ್ಮ ಸಂಚಾರ ಈಗ ಕೇವಲ ಭುವಿಗೆ ಸೀಮಿತವಾಯಿತು. ವಾಯುಸಂಚಾರದ ಬಳಿಕ ಮುಂದೇನು ಅನ್ನೋದಿಕ್ಕೆ ಚಂದಿರನೇ ಉತ್ತರ...'

'ನನಗೆ ಭುವಿಯ ಮೇಲಿನ ಈ ನಗರಿಯ ಸಂಚಾರ ನಿರ್ವಹಣೆಯೇ ತ್ರಾಸದಾಯಕವಾಗಿರುವಾಗ ಇನ್ನು ಚಂದಿರನವರೆಗೆ ಸಂಚಾರ ನಿಯಂತ್ರಣದ ಕೆಲಸ ನನಗೆ ಬೇಡವೇ ಬೇಡ...'

'ನಿಮಗೆ ಅಲ್ಲಿ ಹೋಗಿ ಕರ್ತವ್ಯ ನಿರ್ವಹಿಸಲು ಹೇಳುವವರಾರು ಹನ್ಸ್. ಹಾಗೊಂದು ವೇಳೆ ಆ ಸಂದರ್ಭ ಒದಗಿದರೆ ಆಯ್ಕೆ ನಿಮಗೇ ಬಿಟ್ಟದ್ದು, ಈಗಲೇ ಗಾಬರಿಯೇಕೆ?' ಎಂದು ಛೇಡಿಸಿದ. ಅದಕ್ಕೆ ಹನ್ಸಾ ನಂಬದವಳಂತೆ ತಲೆಯನ್ನು ಆಡಿಸಿ, 'ಮೊನ್ನೆಯಷ್ಟೇ ಚಂದಿರನವರೆಗೆ ಪ್ರವಾಸ ಯೋಜನೆಗೆ ಚಾಲ್ತಿ ನೀಡಲಿರುವ ವಿಚಾರ ಘೋಷಣೆಯಾಗಿದ್ದು ನಿಮಗೆ ತಿಳಿದೇ ಇರಬೇಕು' ಎಂದು ನೆನಪಿಸಿದಳು.

'ಗೊತ್ತಿದೆ. ಆದರೆ ಆ ಸಂದರ್ಭ ಬಂದಾಗ ನಿಮ್ಮನ್ನೇ ಅಲ್ಲಿಗೆ ನಿಯೋಜಿಸುವರೆಂದು ಏಕೆ ನಿರೀಕ್ಷೆ ಮಾಡುವಿರಿ? ಹೊಸಬರನ್ನು ಆ ಕೆಲಸಕ್ಕೆ ನಿಯೋಜಿಸಲೂಬಹುದು.'

'ಹಾಗೂ ಆಗಬಹುದು. ಚಂದಿರನ ಮೇಲಿಂದ ಭೂಮಿಯ ನೋಟ ಪಡೆಯಲು ಈಗಾಗಲೇ ಬುಕ್ಕಿಂಗ್‌ಗಳು ನಡೆದಿದ್ದು ಆನಂತರ ಅದು ಪೂರ್ಣ ಪ್ರಮಾಣದ ಪ್ರವಾಸಿ ತಾಣವಾಗಿ ಮಾರ್ಪಾಡಾಗುತ್ತದೆ. ನನ್ನನ್ನು ಅಲ್ಲಿಗೆ ನಿಯೋಜಿಸಬಹುದೆಂಬ ಸಣ್ಣ ಭೀತಿ...'

'ಹನ್ಸಾ ಮ್ಯಾಮ್. ನಿಮ್ಮ ಬಾಯಿಂದ ಭೀತಿ ಪದ ಕೇಳಿಯೇ ನನಗೆ ಆಶ್ಚರ್ಯವಾಗ್ತಿದೆ. ನಮ್ಮ ಸಂಚಾರ ಸಭೆಯ ಕಾರ್ಯಸೂಚಿಗಳಲ್ಲಿ ಬರುವ ವಿಷಯದ ಬಗ್ಗೆಯಷ್ಟೇ ತಲೆ ಕೆಡಿಸಿಕೊಳ್ಳಿ. ಈಗ ಸದ್ಯ ಇಲ್ಲಿಂದಲೇ ಬಾನಲ್ಲಿನ ಚಂದಿರನ ನೋಟವನ್ನು ಕಣ್ತುಂಬಿಸಿಕೊಳ್ಳೋಣ...' ಎಂದು ಮಾತು ಹಾರಿಸಿದಾಗ ಹನ್ಸಾಳೂ ಬೇರೆ ವಿಷಯಗಳೆಡೆ ಗಮನಹರಿಸಿದಳು.

ಆದರೆ ಅಂದು ಅವರು ಆಶಿಸಿದಂತಹ ವಿಷಯಗಳು, ಸಭೆಯ ಕಾರ್ಯಸೂಚಿಗಳಲ್ಲಿ ನೇರವಾಗಿ ಪ್ರಸ್ತಾಪವಾಗಿರದೆ ಇತರೆ ವಿಷಯಗಳ ಮೇಲೆಯೂ ಬೆಳಕು ಚೆಲ್ಲಲಿದ್ದು, ಸಭೆಯ ಮೂಲಕ ಮಹತ್ವದ ತೀರ್ಮಾನಗಳನ್ನು ತೆಗೆದುಕೊಳ್ಳಲು ನಾಂದಿ ಹಾಡಲಿತ್ತು.

* * *

ಹನ್ಸಾ ವರ್ಕ್‌ಶಾಪ್‌ನಿಂದ ದುರಸ್ತಿಗೊಂಡು ವಾಪಸ್ಸಾದ ತನ್ನ 'ಎಕ್ಸ್' ರೊಬೋವನ್ನು ಸ್ವೀಕರಿಸಿದಾಗ ಜೊತೆಯಲ್ಲಿಯೇ ತನ್ನ ಇತರೆ ಕಮಾಂಡೋ ರೊಬೋಗಳ ಸ್ಥಿತಿಗತಿ ಕುರಿತಾಗಿಯೂ ವಿಚಾರಿಸಿದ್ದಳು. ಆದರೆ ಅವಳ ವಾಕಿ ಕರೆಗೆ ಶೈನಿ ಚುಟುಕು ಉತ್ತರವನ್ನಷ್ಟೇ ನೀಡಿದ್ದ. ಎಷ್ಟಾದರೂ ತನ್ನ ಕೆಲಸವನ್ನು ತ್ವರಿತಗೊಳಿಸಲು ಸಾಧ್ಯವಾಗದೆಂದು ಮೊದಲೇ ಸ್ಪಷ್ಟಪಡಿಸಿದ್ದನಾತ. ಇತರೆ

## ಮುಳ್ಳಿಲ್ಲದ ಗುಲಾಬಿ

ನೀ ನೀಡಿದ ಗುಲಾಬಿ ಹೂವಲ್ಲಿ
ಮುಳ್ಳುಗಳೇ ಇರಲಿಲ್ಲ
ಪ್ರಿಯೆ
ಥೇಟ್ ಮೋಸವಿಲ್ಲದ
ನಿನ್ನ ಪ್ರೀತಿಯಂತೆ!



ಕಾಸರಗೋಡು ಅಶೋಕ್ ಕುಮಾರ್